ಕವಿತೆ



## ಸ್ವಯಂಪ್ರಭಾ ಮಹೇಶ್

ಕಲೆ: ವಿಶ್ವನಾಥ್ ಎ.ಎಸ್.

# ಇಬ್ಬರೂ ಬರುತ್ತಾರೆ

ಅವರಿಬ್ಬರೂ ಬೆಳ್ಳಂಬೆಳಗ್ಗೆ
ಪೊರಕೆ ಹಿಡಿದು ಬರುತ್ತಾರೆ
ಬಿದ್ದು ಮಲಗಿದ ಬಿಸಿಲನ್ನು ಬಡಿದೆಬ್ಬಿಸಿ
ರಾತ್ರಿಯಿಡೀ ಚೆಲ್ಲಿಬಿದ್ದ ಕನಸುಗಳನ್ನು
ಮೊಗೆಮೊಗೆದು ಚೀಲಕ್ಕೆ ತುಂಬುತ್ತಾರೆ

ಬಾಯ್ತುಂಬ ನಗುತ್ತಾರೆ, ಎಣ್ಣೆ ಪಳಚಿದ
ಮುಡಿಗೆ ರಕ್ತ ಕಾರಂಜಿಯಂಥ
ದಾಸವಾಳ ಮುಡಿದು ಬರುತ್ತಾರೆ
ಒಬ್ಬರೇ ಬರುವುದಿಲ್ಲ ಯಾವಾಗ ಬಂದರೂ
ಇಬ್ಬರೂ ಇರುತ್ತಾರೆ

ಸಂತೆಪೇಟೆಯ ಹಸಿರು ಗೌಜನ್ನೇ ಕೈಗೆ ಏರಿಸಿ
ಲೆಕ್ಕವಿಲ್ಲದಷ್ಟು ಜನ ಬಿಟ್ಟು ಹೋದ
ಅನಾಮಿಕ ಹೆಜ್ಜೆಗಳನ್ನು ಹೆಕ್ಕುತ್ತಾರೆ
ಕೆಲವೊಮ್ಮೆ ಮರದ ಅಡಿಗೆ
ತರಗೆಲೆಗಳ ಸಿಂಹಾಸನ ಮಾಡಿ
ಕೂತು ಹರಟುತ್ತಲೇ
ಮುದುರಿ ಬಿದ್ದ ದಿನವೊಂದನ್ನು
ಮೆಲ್ಲ ಬಿಡಿಸಿ ಹರಡುತ್ತಾರೆ

ಸಲಹುತ್ತಾರೆ ಆ ತಾಯಂದಿರಿಬ್ಬರು
ಎಲ್ಲೂ ಬಿಟ್ಟು ಹೋಗಲೊಲ್ಲದ ರಸ್ತೆಗಳನ್ನು
ಪದೇ ಪದೇ ಕ್ಷಮಿಸುತ್ತಾರೆ ಕಸದಂತೆ
ಬಿಸಾಕುವ ಮಾತುಗಳನ್ನು
ಮೆತ್ತಗೆ ಸವರಿ ಸದ್ದಿಲ್ಲದೇ ಚೀಲ ತುಂಬುತ್ತಾರೆ



ಅತ್ತು ಕರೆದು ಶಾಲೆಗೆ ಹೋಗುವ ಮಕ್ಕಳ
ಕಿತ್ತು ಬಿದ್ದ ರೆಕ್ಕೆಗಳನ್ನು

ಕಸಗುಡಿಸಲು ಬರುತ್ತಾರೆ ಅವರಿಬ್ಬರೂ
ನಾವ್ಯಾರೂ ಇಲ್ಲಿ ಇರದೇ ಹೋದಾಗಲೂ
ಬಿಟ್ಟು ಹೋದ ಹೆಸರು ವಿಳಾಸಗಳನ್ನು
ಹೆಕ್ಕಿ ಚೀಲದಲ್ಲಿ ಮೊಗೆಮೊಗೆದು ತುಂಬಿದಂತೆಲ್ಲ,
ತುಳುಕದೇ ನಡೆಯುತ್ತಾರೆ

ಹಚ್ಚಿಕೊಡುತ್ತಾ ಶೃತಿಗೆ ತಪ್ಪಿಹೋದ ಸ್ವರಗಳನ್ನು
ಸಿಕ್ಕಿಸಿ ಹೋಗುತ್ತಾರೆ ಪೂರ್ವದಲ್ಲಿ
ನಾಳೆಯೊಂದನ್ನು
ತಲೆಯ ಮೇಲೆ ಹೊತ್ತ ಗಂಟನ್ನು
ಸಂಭಾಳಿಸುತ್ತಲೇ
ಹೊಳೆಯಂತೆ ಅಬ್ಬರಿಸಿ ಹರಿಯುವ ರಸ್ತೆಗಳನ್ನು
ಕೈಹಿಡಿದೇ ದಾಟುತ್ತಾರೆ
ಅವರಿಬ್ಬರೂ